**1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು**

**ಸಿ. ಸಿ. ನಂ. 903/2022**

ದಿನಾಂಕ: 19.11.2025

**ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀ ಸವಾಲು: ಶ್ರೀ ಡಿ. ಎಸ್. ವಕೀಲರಿಂದ :-

ಹಣ ಕೇಳಲು ಆರೋಪಿ ಒಬ್ಬರೇ ಸಂಜೆ 7.00 ಗಂಟೆ ಸಮಯದಲ್ಲಿ ಬಂದಿದ್ದರು. ನಾನು ನನ್ನ ಮನೆಯಲ್ಲಿ ಆರೋಪಿಗೆ ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಹಣ ಕೊಡುವಾಗ ನಾನು ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಇದ್ದೆವು. 500ರೂ ಮುಖ ಬೆಲೆಯ 10 ಕಟ್ಟುಗಳನ್ನು ನಾನು ಆರೋಪಿಗೆ ಕೊಟ್ಟಿರುತ್ತೇನೆ. ದಿ:23.06.2022ರಂದು ನಿಪಿ-1ನ್ನು ನಾನು ಖಾತೆ ಹೊಂದಿರುವ ಕೆನರ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ದಿ: 29.06.2022 ರಂದು ಹಿಂಬರಹ ಕೊಟ್ಟಿರುತ್ತಾರೆ. ನಾನು ಕೆನರ ಬ್ಯಾಂಕಿನಲ್ಲಿ 20 ವರುಷಗಳಿಂದ ವ್ಯವಹಾರ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ಹೇಳಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾನು ನನ್ನ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಿಲ್ಲ. ಸದರಿ ಸ್ಟೇಟ್ ಮೆಂಟ್ ಹಾಜರುಪಡಿಸಲು ನನಗೆ ಏನು ತೊಂದರೆ ಇಲ್ಲ. ದಿ: 07.07.2022ರಂದು ವಕೀಲರ ಮೂಲಕ ನೋಟಿಸ್ ಕೊಟ್ಟಿರುತ್ತೇನೆ. ಸದರಿ ನೋಟಿಸ್ 20.07.2022ರಲ್ಲಿ ತಲುಪಿರುತ್ತದೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನಾನು ಸರ್ಕಾರಕ್ಕೆ ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ಆರೋಪಿ ನನಗೆ 2022ರ ಹಿಂದೆ 5 ವರುಷಗಳಿಂದ ಪರಿಚಯ. ಆರೋಪಿಯು ಸರ್ಕಾರಿ ದೈಹಿಕ ಶಿಕ್ಷಕರಾಗಿರುತ್ತಾರೆ. ಆರೋಪಿಯು ಸರ್ಕಾರಿ ದೈಹಿಕ ಶಿಕ್ಷಕರಾಗಿರುವುದರಿಂದ ಅವರಿಗೆ ಮಾಸಿಕ 50 ರಿಂದ 60 ಸಾವಿರವರೆಗೆ ಸಂಬಳ ಬರುವುದರಿಂದ ಅವರು ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದರೆ ಇರಬಹುದು. ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನಮ್ಮ ಗ್ರಾಮದ ಶಾಲೆಯಲ್ಲಿ ಶಿಕ್ಷಕರಾಗಿರುವುದರಿಂದ ಅವರು ನನ್ನ ಬಳಿ ಚೀಟಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ ಚೀಟಿ ಹಣವನ್ನು ಪಡೆದುಕೊಂಡ ನಂತರ ಭದ್ರತೆಗಾಗಿ ಚೀಟಿ ಪಡೆಯುವ ಪದ್ಧತಿ ನಮ್ಮ ಚೀಟಿ ವ್ಯವಹಾರದಲ್ಲಿತ್ತು

ಎಂದರೆ ಸರಿಯಲ್ಲ. ಚೀಟಿ ವ್ಯವಹಾರಕ್ಕೆಂದು ಕೊಟ್ಟಿದ್ದ ಚೆಕ್ ನ್ನು ನಾನು ದುರುಪಯೋಗ ಪಡಿಸಿಕೊಂಡು ಅಕ್ರಮವಾಗಿ ಲಾಭ ಪಡೆಯುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನನ್ನು ಭೇಟಿಮಾಡಿಲ್ಲ ಮತ್ತು ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ನೆಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಕಾಲೇಜಿನಲ್ಲಿ ಕೆಲಸ ಮಾಡುತ್ತಿಲ್ಲ ಹಾಗೂ ನನಗೆ ಯಾವುದೇ ಜಮೀನು ಇರುವುದಿಲ್ಲ, ಅವುಗಳಿಂದ ನನಗೆ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ಮೊಬೈಲ್ ಶಾಪ್ ನಡೆಸಲು ನಾನು ಪಂಚಾಯಿತಿ ಯಿಂದ ಪರವಾನಿಗೆ ಪಡೆದುಕೊಂಡಿದ್ದೇನೆ. ಸದರಿ ಪರವಾನಿಗೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಮೊಬೈಲ್ ಶಾಪ್ ನಿಂದ ನನಗೆ ಯಾವುದೇ ಆದಾಯ ಬರುತ್ತಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರದಿಂದ ಯಾವುದೇ ಸೌಲಭ್ಯಗಳನ್ನು ಪಡೆದಕೊಂಡಿಲ್ಲ. ಆರೋಪಿಯ ವಿರುದ್ಧ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

1ನೇ **ಅಧಿಕ ಜೆಎಂಎಫ್‌ಸಿ, ಅರಕಲಗೂಡು.**